10 ಮೀ ಅಗಲ ಹಾಗೂ 10.72 ಮೀಗಳ 2 ಸ್ಪ್ಯಾನ್ ಗಳನ್ನು ಒಳಗೊಂಡಿರುತ್ತದೆ.

ಆ) ಈ ಸೇತುವೆಗಳ ಆರ್.ಸಿ.ಸಿ. ಸ್ಟ್ರಕ್ಚರ್ ಕಾಮಗಾರಿ ಈಗಾಗಲೇ ಮುಗಿದಿದ್ದು, ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಮುಗಿಯದ ಕಾರಣ, ಸೇತುವೆಗಳ ಕಾಮಗಾರಿ ಪೂರ್ಣ ಗೊಂಡಿರುವುದಿಲ್ಲ.

ಇ) ಭೂಸ್ವಾಧೀನ ಪ್ರಕ್ರಿಯೆಗಳ ವಿಳಂಬದಿಂದ ಸೇತುವೆ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ.

ಈ) ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಮಿ ದೊರೆತ ನಂತರ 3 ತಿಂಗಳುಗಳ ಅವಧಿಯಲ್ಲಿ ಸೇತುವೆ ಕಾಮಗಾರಿಗಳನ್ನು ಪೂರ್ಣಗೊಳಿಸ ಲಾಗುವುದು.

ಚೌಡೇಶ್ವರಿಹಳ್ಳಿ ಬ್ರಿಡ್ಜ್ ಅಪೂರ್ಣ

492 (639) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ಕೂಟಗಲ್ ಹೋಬಳಿಯ ಚೌಡೇಶ್ವರಿಹಳ್ಳಿ ಹೊಸೂರು ಮಧ್ಯ ನಿರ್ಮಾಣಗೊಳ್ಳುತ್ತಿರುವ ಸೇತುವೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಇದರ ರೂಪುರೇಷೆಗಳೇನು;

ಆ) ಇತ್ತೀಚೆಗೆ ಈ ಕಾಮಗಾರಿ ಕೆಲಸ ನಿಂತಿರುವುದಕ್ಕೆ ಕಾರಣಗಳೇನು;

ಇ) ಈ ಸೇತುವೆಯು ಸುಮಾರು ಹಳ್ಳಿಗಳಿಗೆ ಲಿಂಕ್ ಸೇತುವೆ ಯಾಗಿದ್ದು, ಈಗಾಗಲೇ ವಿಳಂಬವಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿಲ್ಲವೆ;

ಈ) ಹಾಗಿದ್ದಲ್ಲಿ, ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲೇ ಕಾಮಗಾರಿಯನ್ನು ಮುಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ತುರ್ತು ಕ್ರಮ ತೆಗೆದುಕೊಂಡು ಇನ್ನೂ ಎಷ್ಟು ದಿನದಲ್ಲಿ ಈ ಸೇತುವೆಯನ್ನು ಸಂಪೂರ್ಣ ವಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಸೇತುವೆ ಕಾಮಗಾರಿಯನ್ನು ಮೇ 2009ರಂದು ಪ್ರಾರಂಭಿಸ ಲಾಗಿರುತ್ತದೆ. ಈ ಕಾಮಗಾರಿಯಲ್ಲಿ 2 ಅಬಟ್‌ಮೆಂಟ್ಸ್ ಮತ್ತು 2 ಪಿಯರ್ ಗಳನ್ನು ಒಳಗೊಂಡಂತೆ 7.5 ಮೀ. ಅಗಲಕ್ಕೆ ಸೇತುವೆ ನಿರ್ಮಾಣ ಮಾಡಬೇ ಕಿರುತ್ತದೆ. ಹಾಲಿ ಒಂದು ಅಬಟ್‌ಮೆಂಟ್ ಮತ್ತು ಒಂದು ಪಿಯರ್‌ನ ಕೆಲಸ ಗಳನ್ನು ಕ್ಯಾಪ್‌ಲೆವೆಲ್ ಮಟ್ಟಕ್ಕೆ ಪೂರ್ಣಗೊಳಿಸಲಾಗಿದೆ.

ಆ) ಮಳೆಗಾಲದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹಳ್ಳದಲ್ಲಿ ನೀರು ಹರಿದು ಸದರಿ ಕಾಮಗಾರಿಗೆ ಅಡಚಣೆ ಉಂಟಾಗಿದ್ದರಿಂದ ಮಳೆಗಾಲದಲ್ಲಿ ಮಾತ್ರ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು.

ಇ) ಇಲ್ಲ. ಸದರಿ ಸೇತುವೆ ಮೇಲ್ಭಾಗದಲ್ಲಿ ತಾತ್ಕಾಲಿಕ ಏರಿಯನ್ನು ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲಾಗಿದೆ.

ಈ) ಈ ಸೇತುವೆ ಕಾಮಗಾರಿಯನ್ನು ಜೂನ್ 2010ರ ಅಂತ್ಯ ದೊಳಗೆ ಪೂರ್ಣಗೊಳಿಸಲಾಗುವುದು.

ಸಹಕಾರ ಸಂಘ ಚುನಾವಣಾ ಸಮಯದಲ್ಲಿ ಆಡಳಿತ ಮಂಡಳಿಗಳ ತಿರ್ಮಾನ

493 (650) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್–ದಕ್ಷಿಣ) : ಮಾನ್ಯ ಸಹಕಾರ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿಯ ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭಗಳಲ್ಲಿ ಅಂತಹ ಸಹಕಾರ ಸಂಘಗಳ ಆಡಳಿತ ಮಂಡಳಿಗಳು ಮಹತ್ತರ ವಿಷಯದ ಬಗ್ಗೆ ತೀರ್ಮಾನಗಳನ್ನು ತೆಗೆದು ಕೊಳ್ಳಬಹುದೇ?

ಆ) ಅಂತಹ ತೀರ್ಮಾನಗಳನ್ನು ತೆಗದುಕೊಂಡಲ್ಲಿ ಅವುಗಳನ್ನು ಅನುಷ್ಠಾನಕ್ಕೆ ತರಬಹುದೇ?

ಇ) ಅಂತಹ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದರಿಂದ ಸಹಕಾರಿ ಸಂಘಗಳಿಗೆ ನಷ್ಟವಾದಲ್ಲಿ ಜವಾಬ್ದಾರರು ಯಾರು?

ಈ) ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯಿಂದ ಏನಾದರೂ ಮಾರ್ಗಸೂಚಿಗಳನ್ನು ನೀಡಲಾಗಿರುವುದೇ?

ಉ) ಮಾರ್ಗಸೂಚಿ ನೀಡಿದ್ದಲ್ಲಿ, ಅದರ ಪ್ರತಿ ಒದಗಿಸುವುದು?